ಎದೆಯೆತ್ತರಕ್ಕೆ ಬೆಳೆದು ನಿಂತಿರುವ ಮಗ ಗುಂಡನಿಗೆ ಅಪ್ಪ ಒಮ್ಮೆ ಹೇಳಿದರು, 'ಪ್ರೀತಿ ಪ್ರೇಮ ಅಂತ ಏನಾದರೂ ವ್ಯವಹಾರವಿದ್ದರೆ ಹೇಳಿಬಿಡು, ಮದುವೆ ಮಾಡಿಸುತ್ತೇನೆ'. ಅಪ್ಪನ ಮಾತಿಂದ ಖುಷಿಗೊಂಡ ಗುಂಡ ಧೈರ್ಯವಹಿಸಿ ಅದೊಮ್ಮೆ ಹೇಳಿಯೇ ಬಿಟ್ಟಾಗ ಅಪ್ಪನ ಚಾಟಿಯೇಟಿನ ರುಚಿ ತಿನ್ನಬೇಕಾಯಿತು. ಆಗ ಗುಂಡ ಅಂದುಕೊಂಡ, 'ಏಪ್ರಿಲ್ ಫೂಲ್ ಅಂದರೇನೆಂದು ನನ್ನಪ್ಪನಿಂದ ಕಲಿಯಬೇಕು'!

***

**ಮಗ:** ಏಪ್ರಿಲ್ 1ನೇ ತಾರೀಕನ್ನೇಕೆ ಮೂರ್ಖರ ದಿನವನ್ನಾಗಿ ಆಚರಿಸಲಾಗುತ್ತದೆ?
**ಅಪ್ಪ:** ಏಕೆಂದರೆ ಮಾರ್ಚ್ 31ರವರೆಗೆ ನಾವು ಸರ್ಕಾರದ ಎಲ್ಲಾ ತೆರಿಗೆಗಳನ್ನು ಪಾವತಿಸಿ ಏಪ್ರಿಲ್ 1ರಿಂದ ಪುನಃ ಸರ್ಕಾರಕ್ಕಾಗಿ ದುಡಿಯಲಾರಂಭಿಸುತ್ತೇವೆ ಮತ್ತು ಸರ್ಕಾರ ಅದನ್ನು ದುಡಿಯದ ಸೋಮಾರಿಗಳಿಗೆ ವಿವಿಧ ಸಹಾಯಧನದ ರೂಪದಲ್ಲಿ ಹಂಚಿ ಮತ ಖರೀದಿಸುತ್ತದೆ!

***


**ಪತ್ನಿ:** ಸಂಪ್ರದಾಯಬದ್ಧ ಮದುವೆಗಳಲ್ಲಿ ಆದೇಕೆ ಹೆಣ್ಣನ್ನು ಎಡಬದಿಗೂ ಗಂಡನ್ನು ಬಲಬದಿಗೂ ಕೂರಿಸಲಾಗುತ್ತದೆ?
**ಗುಂಡ:** ಏಕೆಂದರೆ, ಮಾರ್ಚ್ ಕೊನೆಯಲ್ಲಿ ತಯಾರಿಸುವ ವಾರ್ಷಿಕ ಲಾಭ ನಷ್ಟದ ಕಡತದ ಪ್ರಕಾರ ಆದಾಯವನ್ನು ಬಲಬದಿಯಲ್ಲೂ ಖರ್ಚನ್ನು ಎಡಬದಿಯಲ್ಲೂ ನಮೂದಿಸಲಾಗುತ್ತದೆ ಅದಕ್ಕೆ.

***

ಗುಂಡ ಅಪರಿಚಿತನಂತೆ ಸ್ವರ ಬದಲಾಯಿಸಿ ಪುಂಡನಿಗೆ ಫೋನಾಯಿಸಿದ.
ಪುಂಡ ಫೋನೆತ್ತಿದ...
**ಪುಂಡ:** ಹಲೋ.
**ಗುಂಡ:** ಹಲೋ ಫ್ರಿಜ್ ಚಲಿಸುತ್ತಿದೆಯೇ?
**ಪುಂಡ:** ಹ್ಞಾಂ ಚಲಿಸುತ್ತಿದೆ; ನೀವು ಯಾರು?
**ಗುಂಡ:** ನಾನು ಯಾರಾದರೇನು? ಮೊದಲು ಅದನ್ನು ಹಿಡಿದಿಟ್ಟುಕೊ. ಇಲ್ಲದಿದ್ದರೆ ಅದು ಓಡಿ ಹೋದೀತು!
ಸ್ವಲ್ಪ ಸಮಯದ ಬಳಿಕ ಗುಂಡ ಪುನಃ ಸ್ವರ ಬದಲಾಯಿಸಿ ಫೋನ್ ಮಾಡಿದ...
**ಗುಂಡ:** ಫ್ರಿಜ್ ಇದೆಯೇ?
**ಪುಂಡ:** (ಸಿಟ್ಟಿನಿಂದ) ಇಲ್ಲ.
**ಗುಂಡ:** ನೋಡಿದಿಯಾ? ನಾನು ಮೊದಲೇ ಹೇಳಿದ್ದೆ, ಅದನ್ನು ಹಿಡಿದಿಟ್ಟುಕೊ, ಇಲ್ಲದಿದ್ದರೆ ಓಡಿ ಹೋಗುವುದೆಂದು. ನನ್ನ ಮಾತು ಕೇಳಿದಾ?

***

ಗುಂಡ ಸಿಗ್ನಲ್ ದಾಟಿ ಕಾರು ಓಡಿಸಿದ. ಆತನನ್ನು ಹಿಂಬಾಲಿಸಿ ಏಳೆಂಟು ಇತರ ವಾಹನಗಳೂ ಸಿಗ್ನಲ್ ದಾಟಿ ಹೋದವು. ಅವರೆಲ್ಲರನ್ನೂ ಮುಂದೆ ಪೊಲೀಸರು ನಿಲ್ಲಿಸಿ ದಂಡ ವಸೂಲಿ ಮಾಡಿದರು. ಆದರೆ ಗುಂಡನಿಗೆ ದಂಡ ವಿಧಿಸದೆ




ಮೇಲಾಗಿ ಭಕ್ಷೀಸು ನೀಡಿದರು. ಈ ಕುರಿತು ಇತರರು ಪ್ರಶ್ನಿಸಿದಾಗ ಪೊಲೀಸರೆಂದರು, 'ಅವನು ನಮ್ಮವನೇ, ಈಗ ಪುನಃ ಇನ್ನಷ್ಟು ಸಿಗ್ನಲ್ ದಾಟುವವರನ್ನು ಹಿಡಿದು ಕೊಡಲು ಹೊರಟಿದ್ದಾನೆ. ಏನು ಮಾಡಲಿ, ಇದು ಮಾರ್ಚ್ ಕೊನೆಯ ವಾರ. ನಮಗೂ ನಮ್ಮ ಟಾರ್ಗೆಟ್ ಪೂರ್ತಿಗೊಳಿಸಬೇಕಾದ ಅನಿವಾರ್ಯ ಇದೆ'!

***

ಏಪ್ರಿಲ್ ಒಂದರಂದು ಹರೀಶ ಹೀಗೊಂದು ಸಂದೇಶವನ್ನು ತನ್ನ ಮಿತ್ರರ ವಾಟ್ಸ್ಆ್ಯಪ್ ಗ್ರೂಪ್‌ನಲ್ಲಿ ಹರಿಯಬಿಟ್ಟ. ಅದು ಹೀಗಿತ್ತು... 'ನಿಮ್ಮಲ್ಲಿ ಯಾರಿಗಾದರೂ ಹೆಲಿಕಾಪ್ಟರ್ ಪ್ರಯಾಣದಲ್ಲಿ ಆಸಕ್ತಿ ಇದೆಯೇ? ನಾವು ಆರು ಜನರ ಪ್ರಯಾಣ ಆಯೋಜಿಸುತ್ತಿದ್ದೇವೆ. 4 ಸೀಟುಗಳು ಈಗಾಗಲೇ ಭರ್ತಿಯಾಗಿವೆ. ಇನ್ನು ಇಬ್ಬರಿಗೆ ಮಾತ್ರ ಅವಕಾಶವಿದೆ. ಇದೇ ತಿಂಗಳ 30ರಂದು ಪೂರ್ವಾಹ್ನ ಬೆಂಗಳೂರಿನಿಂದ ನಂದಿಬೆಟ್ಟಕ್ಕೆ ಹೊರಟು ಅಲ್ಲೇ ಬೆಳಗ್ಗಿನ ಉಪಾಹಾರ ಸೇವಿಸಲಿದ್ದೇವೆ. ಮಧ್ಯಾಹ್ನದ ಊಟವೂ ಪಂಚತಾರಾ ಶೈಲಿಯಲ್ಲಿರಲಿದೆ. ಅಲ್ಲಿ ಹೊಸದಾಗಿ ತೆರೆದಿರುವ ರೆಸಾರ್ಟಿನಲ್ಲಿ ನಾವು ರಾತ್ರಿ ತಂಗಿ ಮರುದಿನ ಬೆಳಿಗ್ಗೆ ಬೆಂಗಳೂರಿಗೆ ಹಿಂತಿರುಗಿ ತಿಂಗಳಾಂತ್ಯದ ಪ್ರವಾಸವನ್ನು ಕೊನೆಗೊಳಿಸುತ್ತೇವೆ. ಆಸಕ್ತರು ತಕ್ಷಣ ನನಗೆ ವಾಟ್ಸ್ಆ್ಯಪ್ ಸಂದೇಶ ರವಾನಿಸಬೇಕು.'
**ವಿ.ಸೂ.:** ಇಬ್ಬರಲ್ಲೊಬ್ಬರ ಬಳಿ ಸ್ವಂತದ ಹೆಲಿಕಾಪ್ಟರ್ ಇರುವುದು ಅತ್ಯವಶ್ಯ. ಇಲ್ಲದಿದ್ದರೆ ಪ್ರವಾಸ ರದ್ದುಗೊಳಿಸಲಾಗುವುದು!

***

ಏಪ್ರಿಲ್ ತಿಂಗಳ ಮೊದಲನೆಯ ದಿನ ಸಂಬಳ ಅಕೌಂಟ್ ಸೇರುವ ದಿನವಾದ್ದರಿಂದ ಗುಂಡ ಒಳ್ಳೆಯ ಮೂಡ್‌ನಲ್ಲಿದ್ದ. ಅದೇ ಗುಂಗಿನಲ್ಲಿ ಬೆಳಿಗ್ಗೆ ಎದ್ದವನೇ ಹೆಂಡತಿಗೆ ಪ್ರೀತಿಯಿಂದ 'ಐ ಲವ್ ಯೂ' ಅಂದ. ಆಕೆ ತಕ್ಷಣ ಹೀಗೆ ಪ್ರತಿಕ್ರಿಯಿಸಿದಳು... 'ನಮ್ಮನೆ ದೇವ್ರ ಗುಟ್ಟು ನನಗೆ ಗೊತ್ತಿಲ್ವಾ? ಮುಂಜಾನೆಯೆದ್ದು ಏಪ್ರಿಲ್ ಫೂಲ್ ಮಾಡಲು ನಿಮಗೆ ನಾನೇ ಸಿಕ್ಕಿದ್ದೇನ್ರೀ?'

***

ಪತ್ನಿಪೀಡಿತ ಗುಂಡನ ಸ್ವಗತ...
''ನಮ್ಮಂಥಾ ಗಂಡಸರಿಗಾಗಿ 'ತವರಿಗೆ ಹೋಗು, ತವರಿಗೆ ಹೋಗು, ತವರಿಗೆ ಹೋಗು' ಎಂದು ಹೇಳಿಬಿಟ್ಟರೆ ಪತ್ನಿ ಹತ್ತು ದಿನಗಳ ಅವಧಿಗೆ ಕಡ್ಡಾಯ ತವರಿಗೆ ಹೋಗುವಂಥಾ ಕಾನೂನನ್ನಾದರೂ ಸರ್ಕಾರ ಜಾರಿಗೊಳಿಸಿದರೆ ಕೊಂಚ ಸಮಾಧಾನ ಸಿಗಬಹುದು''!

***

**ಪತ್ನಿ:** ನಿನ್ನೆ ನಾನು ಸುಂದರ ಹುಡುಗಿಯನ್ನು ನೋಡಿದೆ.
**ಪತಿ:** ಸರಿ, ಆಮೇಲೆ ಏನಾಯಿತು?
**ಪತ್ನಿ:** ನಾನವಳನ್ನು ತುಂಬಾ ಮೆಚ್ಚಿದೆ, ತದೇಕ ಚಿತ್ತಳಾಗಿ ಅವಳನ್ನೇ ನೋಡತೊಡಗಿದೆ.
**ಪತಿ:** (ಆ ಸುಂದರಿ ಯಾರೆಂದು ತಿಳಿಯುವ ಕುತೂಹಲದಿಂದ) ಆಮೇಲೇನಾಯಿತೆಂದು ಹೇಳ್ತೀಯಾ?
**ಪತ್ನಿ:** (ತುಂಟ ನಗೆ ನಕ್ಕು) ಆಮೇಲೆ ನಾನು ಸಂತೃಪ್ತಳಾಗಿ ಆ ಕನ್ನಡಿಯಿಂದ ದೂರ ಸರಿದೆ!

***

ನಸು ಮುಂಜಾನೆ ಗುಂಡನನ್ನೆಬ್ಬಿಸಿ ಪತ್ನಿ ಆಜ್ಞಾಪಿಸಿದಳು, 'ಏಳ್ರೀ... ನನಗೆ ತಿಂಡಿ ತಯಾರಿಸಿ ಕೊಡಿ'. ಆತ ಎದ್ದು ಮನೆಯಿಂದ ಹೊರ ಹೊರಟಾಗ ಪತ್ನಿ ಎಲ್ಲಿಗೆಂದು ಪ್ರಶ್ನಿಸಿದಳು. 'ವಕೀಲರ ಮನೆಗೆ ಹೋಗುತ್ತಿದ್ದೇನೆ, ನಿನ್ನಿಂದ ವಿಚ್ಛೇದನ ಪಡೆಯಲು' ಎಂದ. ಸ್ವಲ್ಪ ಸಮಯದ ನಂತರ ವಕೀಲರ ಮನೆಯಿಂದ ಹಿಂತಿರುಗಿದ ಗುಂಡ ನೇರ ಅಡುಗೆ ಮನೆ ಹೊಕ್ಕು ತಿಂಡಿ ತಯಾರಿಸತೊಡಗಿದ. ಏಕೆ ಗೊತ್ತೆ? ಗುಂಡ ಅವರ ಮನೆಗೆ ಹೋದಾಗ ವಕೀಲರೂ ಮುಸುರೆ ತಿಕ್ಕುವ ಕಾಯಕದಲ್ಲಿ ನಿರತರಾಗಿದ್ದರು!

***

**ಗುಂಡ:** ಹುಡುಗಿ ಕಣ್ಣು ಮುಚ್ಚಿಕೊಂಡರೆ ಅವಳು ತುಂಬಾ ಪ್ರೀತಿಸುವ ಹುಡುಗ ಕಾಣಿಸಿಕೊಳ್ಳುತ್ತಾನಂತೆ.
**ಪುಂಡ:** ಹೌದೇ, ಹಾಗಾದರೆ ಹುಡುಗ ಕಣ್ಣು ಮುಚ್ಚಿಕೊಂಡರೆ?
**ಗುಂಡ:** ಸ್ಲೈಡ್ ಶೋ ಆರಂಭವಾಗುತ್ತದೆ!

***

ವಿವಾಹದ ವಿಚ್ಛೇದನದ ವ್ಯಾಜ್ಯವೊಂದರಲ್ಲಿ ನ್ಯಾಯಾಲಯವು ಪತಿಯು ತನ್ನ ವೇತನದ ಅರ್ಧಭಾಗವನ್ನು ಪತ್ನಿಗೆ ನೀಡಬೇಕೆಂದು ಆದೇಶಿಸಿತು. ಆಗ ಖುಷಿಯಿಂದ ಬೀಗುತ್ತಾ ಪತಿ ಅಂದುಕೊಂಡ, 'ಇನ್ನು ಮುಂದೆ ಅರ್ಧ ಸಂಬಳ ನನ್ನ ಬಳಿಯೇ ಇರುತ್ತದೆ'!

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ, ಮುಂಬೈ**